ಸಿಂಗರಿಸಿಕೊಂಡು ಅವನ ಮುಂದೆ ಸುಳಿದಾಡಿದರೆ ಊಹೂಂ ಒಂದು ಮೆಚ್ಚುಗೆಯ ಮಾತು, ಹೋಗಲಿ ಮೆಚ್ಚುಗೆಯ ನೋಟವೂ ಇಲ್ಲದೆ ಪುಸ್ತಕದಲ್ಲಿ ಮುಖವಿಡುತ್ತಿದ್ದ. ತಾನೇ ಹೋಗಿ ಅವನ ಮುಂದೆ ನಿಂತು 'ನೋಡಿ, ಈ ಸರ ನನಗೆ ಒಪ್ಪುತ್ತದೆಯೆ? ಈ ಸೀರೆಯಲ್ಲಿ ನಾನು ಹೇಗೆ ಕಾಣುತ್ತೇನೆ?' ಎಂದು ಕೇಳಿದರೆ, ಪುಸ್ತಕದಿಂದ ಮುಖವೆತ್ತದೆ 'ಚೆನ್ನಾಗಿದೆ' ಎಂಬ ಮೈ ಪರಚಿಕೊಳ್ಳುವಂತಹ ಮಾತು. ತನಗೆ ಕಣ್ಣೀರು.

ಕ್ರಮೇಣ ಇಪ್ಪತ್ತೆರಡರ ತಾರುಣ್ಯ ಸಹಜ ಅನಿಸಿಕೆಗಳೆಲ್ಲ ತನ್ನದೆಯಲ್ಲಿ ಬುಸುಗುಟ್ಟತೊಡಗಿದುವು. ಮೊದಲೆಲ್ಲ ಒಂದೊಂದು ಸಲ ಅವಳಿಗೆನಿಸುತ್ತಿದ್ದ. ತನಗೊಂದು ಮಗುವಾಗಬೇಕು ಎನ್ನುವ ಬಯಕೆ ಕ್ರಮೇಣ ಬೆಳೆದು ಮರವಾಯಿತು. ಕಾರ್ತಿಕ್ ಅವಳಿಂದ ದೂರ ಇರುತ್ತಿರಲಿಲ್ಲ. ಆದರೆ ಹೆಂಡತಿಯ ಬಗ್ಗೆ ತುಂಬ ಆಸಕ್ತಿ ತಳೆವ, ಅತ್ಯಂತ ರಸಿಕ, ಉತ್ಸಾಹಿ, ಪ್ರೀತಿಯಲ್ಲಿ ಹಿಗ್ಗುವ, ಜೊತೆಗಾತಿಯನ್ನು ಅರಳಿಸುವ, ಕವಿತಾಳ ಕಲ್ಪನೆಯ ಪತಿಯ ಚಿತ್ರ ಹರಿದು ಚೂರು ಚೂರಾಯ್ತು.

ಸಂಸಾರ ಹೂಡಿದ ಪ್ರತಿದಿನವೂ ಅವನ ಸ್ವಭಾವವನ್ನು ಸ್ಪಷ್ಟವಾಗಿಸಿತು. ಮನಬಂದರೆ ಅವಳನ್ನು ಅಪ್ಪಿ, ಮುದ್ದಿಸಿ, ರಾತ್ರಿಗಳಿಗೆ ಬಣ್ಣ ಬಳಿಯುತ್ತಾನೆ. ಇಲ್ಲದಿದ್ದರೆ ಅವಳ ಕಣ್ಣುಗಳಲ್ಲಿ ಹಂಬಲ ಸಾಗರದಂತೆ ಭೋರ್ಗರೆದಾಗಲೂ ಹಿಮವಾಗುತ್ತಾನೆ. ಒಲವಿನ ನೋಟವಿಲ್ಲ–ಮುತ್ತಿನ ಮಾಲೆಗಳು ಅವಳಿಗೆ ಹೊರಲಾರದ ಒಡವೆಗಳಾಗುತ್ತವೆ. ಕೆಲವೊಮ್ಮೆ ಮೈಯನ್ನು ಮಾತಾಡಿಸುತ್ತಾನಾದರೂ ಮನಸ್ಸಿನೊಂದಿಗೆ ಮೌನಿಯೇ ಅವನು.

ಇದೆಲ್ಲ ನೆನೆದಾಗ ಕವಿತಾಗೆ, ತನಗೆ ಹುಚ್ಚು ಹಿಡಿಯುವ ದಿನ ದೂರವಿಲ್ಲ ಎನಿಸುತ್ತದೆ. ಕೈ ಹಿಡಿದ ಪತಿಯಿದ್ದರೂ ಬಯಕೆ ಬಿಕ್ಕಳಿಸುತ್ತದೆ. ಹೃದಯ ಭಣಗುಟ್ಟುತ್ತದೆ. ಅವ್ಯಕ್ತ ಭಾವನೆಗಳು ಅನಿಶ್ಚಿತತೆಯ ಸ್ಥಿತಿಯಲ್ಲಿ ತೊಳಲಾಡುತ್ತವೆ. ಅವರ ಬಗೆಗಿದ್ದ ಪ್ರೇಮವನ್ನು ಬಾಯಿ ಬಿಟ್ಟು ಸುಂದರ ಶಬ್ದಗಳಲ್ಲಿ ಹೇಳಬೇಕೆನಿಸುತ್ತದೆ. ತನ್ನ ರಸಿಕತೆಯ ಧ್ವನಿಗೆ ಪ್ರತಿಧ್ವನಿ ಬೇಕೆನಿಸುತ್ತದೆ. ತನ್ನ ಒಳಗುದಿಯನ್ನು ಅವರ ಮುಂದೆ ಬಯಲಾಗಿಸಬೇಕೆನಿಸುತ್ತದೆ. ಹಾಗೆ ಒಮ್ಮೊಮ್ಮೆ ಅವರ ಮೈಸವರಿ, ಕ್ರಾಪಿನ ಕೂದಲೆಲ್ಲ ಕೆಡುವಂತೆ ಬೆರಳಾಡಿಸಿ, ಕೆನ್ನೆಗೆ ತುಟಿಯೊತ್ತಿದರೆ ಅವರ ಪ್ರತಿಕ್ರಿಯೆ ಎಂಥದು! ಮಗುವನ್ನು ರಮಿಸುವಂತೆ ತನ್ನ ತಲೆಸವರಿ 'ಹೋಗು ಕವೀ, ಮಲಗು, ಜಾಣ ಮರಿ' ಎನ್ನುತ್ತಾರೆ. ಅವರಲ್ಲಿ ನಾನು ಕರಗಬೇಕು, ನನ್ನನ್ನು ಅವರು ಹಿಂಡಬೇಕು ಎಂದಾಗ ಇಂಥ ಮಂಜಿನ ಸ್ಪರ್ಶಕ್ಕೆ ಎದೆಯ ಅನಿಸಿಕೆಗಳು ಅನಾಥವಾಗುತ್ತವೆ.

ತನಗೆ ಒಂದಾದರೂ ಮಗು ಹುಟ್ಟಬಾರದೆ? ಈ ಬಯಕೆಯ ಹಸಿವು ಇಂಗಿಸಲಾರದೆ ಅದನ್ನು ಹೊರದೂಡುವ ಮಾರ್ಗ ಕಾಣಲಾರದೆ ನಿಟ್ಟುಸಿರಿನ ಕಟ್ಟುಗಳನ್ನು ಬಿಚ್ಚುತ್ತಾಳೆ.

ಹೀಗೆಯೇ ನಿರಾಸಕ್ತಿಯಿಂದ ನಾಲ್ಕು ವರ್ಷಗಳನ್ನು ತಳ್ಳಿದ್ದಾಯ್ತು. ಯಾತನೆ ನೀಗಿಸಲಾದರೂ ತಾನು ತಾಯಿಯಾಗದೆ ಇದ್ದದ್ದು ಅವಳಿಗೆ ಭಯಂಕರ ಪೆಟ್ಟು. ಒಂದು ದಿನ ಅವಳು ತಡೆಯಲಾಗದೆ ಬಾಯಿಬಿಟ್ಟು ಕಾರ್ತಿಕನಿಗೆ 'ನಡೆಯಿರಿ, ನನ್ನಲ್ಲೇನೋ ದೋಷವಿರಬೇಕು. ಮದುವೆಯಾಗಿ ನಾಲ್ಕು ವರ್ಷವಾದರೂ ಮಕ್ಕಳಾಗಲಿಲ್ಲ. ಡಾಕ್ಟರ್ ಹತ್ತಿರ ಹೋಗುವಾ' ಎಂದು ದುಂಬಾಲು ಬಿದ್ದಾಗ ಮೊದಮೊದಲು ಏನೇನೋ ನೆಪ ಹೇಳಿ ನುಸುಳಿಕೊಳ್ಳುತ್ತಿದ್ದ ಕಾರ್ತಿಕ್ ಕೊನೆಗೊಂದು ದಿನ ಅಪರಾಧಿ ದನಿಯಲ್ಲಿ ಉಸುರಿದ್ದ.

'ನಿನಗೆ ಆಗೋ ಹಾಗಿದ್ರೆ ಇಷ್ಟು ಹೊತ್ಗೇ ಆಗ್ತಾಯಿತ್ತು ಕವೀ. ನೀನು ಡಾಕ್ಟರಿಗೆ ತೋರಿಸೋದು ಬೇಡ.'